ಶ್ರೀ ಮನೋಹರ ಪುನ್ನಪ್ಪ ಕಾಡೋಲ್ಕರ್ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕರ್ನಾಟಕದಲ್ಲಿರುವ ಶಾಲೆಗಳಿಗೆ ಸರ್ಕಾರದವರು ಬೇಗನೇ ಅನುದಾನವನ್ನು ಕೊಡುತ್ತಾರೆ. ಆದರೆ ಉತ್ತರ ಕರ್ನಾಟಕದ ಭಾಗದ ಶಾಲೆಗಳಿಗೆ ಏಕೆ ಬೇಗ ಅನುದಾನವನ್ನು ಕೊಡುವುದಿಲ್ಲ? ಇವರ ಅನುದಾನ ಸಂಹಿತೆಯ ಷರತ್ತುಗಳಲ್ಲಿ ಕೆಲವನ್ನು ಪಾಲಿಸದಿದ್ದರೂ ಸಹ ದಕ್ಷಿಣ ಕರ್ನಾಟಕ ಭಾಗದ ಶಾಲೆಗಳಿಗೆ ಅನುದಾನವನ್ನು ಕೊಡುತ್ತಾರೆ.

(ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತನಾಡಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಗಿದೆ)

ಶ್ರೀ ಎಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ನಾವು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದ ಶಾಲೆಗಳಿಗೆ ಅನುದಾನ ಕೊಡುವಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದೇವೆ ಎಂದಿದ್ದಾರೆ. ಅದು ಖಂಡಿತ ಇಲ್ಲ. ಅನುದಾನ ಶಾಲೆಗಳು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿಯೇ ಇರುವುದು. ದಿನಾಂಕ 01-06-1987ರವರೆಗೆ ಯಾವ ಯಾವ ಶಾಲೆಗಳು ಅನುದಾನ ಸಂಹಿತೆಯಲ್ಲಿನ ಷರತ್ತುಗಳನ್ನು ಪರಿಪೂರ್ಣ ಮಾಡಿವೆಯೋ ಅವಕ್ಕೆಲ್ಲಾ ಅನುದಾನವನ್ನು ಕೊಡಲಾಗಿದೆ. ಒಂದು ವೇಳೆ ಅಂಥ ಶಾಲೆಗಳಿಗೆ ಅನುದಾನವನ್ನು ಕೊಟ್ಟಿಲ್ಲವೆಂದರೆ ಅದನ್ನು ಅವರು ಹೇಳಲಿ; ಬಂದಿರುವುದು ಶಾಶ್ವತ ಅನುದಾನರಹಿತ ಶಾಲೆಗಳಾಗಿರುವುದರಿಂದ ಆ ಶಾಲೆಗಳಿಗೆ ಸರ್ಕಾರ ಅನುದಾನವನ್ನು ಕೊಡುತ್ತಿಲ್ಲ.

ಭಟ್ಕಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುರಸ್ತಿ

199 (1725) ಶ್ರೀ ನಾಯಕ್ ಜೆ.ಡಿ. (ಭಟ್ಕಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಟ್ಕಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಕೆ.ಹೆಚ್.ಎಸ್.ಡಿ.ಪಿ.ಯಿಂದ ಮಂಜೂರಾದ ಮೊತ್ತವೆಷ್ಟು? ಈಗ ಖರ್ಚಾದ ಮೊತ್ತವೆಷ್ಟು?

ಆ) ಸದರಿ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳು ಯಾವುವು?

ಇ) ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಭಟ್ಕಳ ತಾಲ್ಲೂಕು ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಒಟ್ಟು ರೂ. 40.35 ಲಕ್ಷ ಅಂದಾಜಿಗೆ ಮಂಜುರಾತಿ ನೀಡಿದ್ದು ಇಲ್ಲಿಯವರೆವಿಗೆ ಒಟ್ಟು ರೂ.44.47 ಲಕ್ಷ ವೆಚ್ಚವಾಗಿರುತ್ತದೆ.

ಆ) ಈ ಯೋಜನೆಯಡಿ ಹಾಲಿ ಇರುವ ಆಸ್ಪತ್ರೆಯನ್ನು 40 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ಅಭಿವೃದ್ಧಿ ಪಡಿಸಲಾಗುವುದು.

ಇ) ಉತ್ತರದ (ಆ) ಭಾಗದಲ್ಲಿ ಕಾಣಿಸಿದ ಕಾಮಗಾರಿಗಳನ್ನು ಹೊರತುಪಡಿಸಿ ಇನ್ನು ಹೆಚ್ಚಿನ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಜೆ. ಡಿ. ನಾಯಕ್ : ಮಾನ್ಯ ಅಧ್ಯಕ್ಷರೆ, ಭಟ್ಕಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಕೆ. ಹೆಚ್. ಎಸ್. ಡಿ. ಪಿ. ಯಿಂದ ಮಂಜೂರಾದ ಮೊತ್ತವೆಷ್ಟು? ಮತ್ತು ಖರ್ಚಾಗಿರುವ ಮೊತ್ತವೆಷ್ಟು ? ಎಂದು ಕೇಳಿರುವುದಕ್ಕೆ ಉತ್ತರದಲ್ಲಿ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಭಟ್ಕಳ ತಾಲ್ಲೂಕು ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಒಟ್ಟು 40. 35 ಲಕ್ಷ ರೂಪಾಯಿಗಳ ಅಂದಾಜಿಗೆ ಮಂಜುರಾತಿ ನೀಡಿದ್ದು ಇಲ್ಲಿಯವರೆಗೆ ಒಟ್ಟು 44.47 ಲಕ್ಷ ರೂ. ಗಳ ವೆಚ್ಚವಾಗಿದೆಯೆಂದು ಹೇಳಿದ್ದಾರೆ. ನನ್ನ ಭಾವನೆಯಂತೆ ಈಗೇನು ಆ ಹಣವನ್ನು ಖರ್ಚು ಮಾಡಿದ್ದಾರೆ ಆ ಮಟ್ಟದಲ್ಲಿ ಅಲ್ಲಿ ಕೆಲಸಗಳಾಗಿಲ್ಲ. ನಾನು ನನ್ನ ಪ್ರಶ್ನೆಯಲ್ಲಿ ಅಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ವಿವರ ಕೇಳಿದ್ದೆ. ಆದರೆ ಕಾಮಗಾರಿಗಳ ವಿವರವನ್ನು ಸಚಿವರು ಕೊಟ್ಟಿಲ್ಲ. ಆದುದರಿಂದ ಆ ವಿವರವನ್ನು ಕೊಡಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಡಾ॥ ಎ. ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಆಸ್ಪತ್ರೆ ನವೀಕರಣ ಮತ್ತು ವಿಸ್ತರಣಾ ಕಾಮಗಾರಿಗಾಗಿ ಅಂದಾಜನ್ನು 40 ಲಕ್ಷ ರೂಪಾಯಿಗಳಿಗೆ ನಿಗಧಿಪಡಿಸಿದ್ದರೂ ಕೂಡ ನಿಜವಾಗಿ ಇಲ್ಲಿಯವರೆಗೆ 44 ಲಕ್ಷ 93 ಸಾವಿರ ರೂಪಾಯಿಗಳು ಖರ್ಚಾಗಿದೆ. ಈ ಬಗ್ಗೆ ಇನ್ನು ವಿವರವಾಗಿ ಹೇಳಬೇಕೆಂದರೆ, 40 ಹಾಸಿಗೆಗಳ ಆಸ್ಪತ್ರೆಯನ್ನು 50 ಹಾಸಿಗೆಗಳಿಗೆ ಮೆಲ್ದರ್ಜೆಗೇರಿಸಿದ್ದೇವೆ. ಇದಕ್ಕಾಗಿ ಹೊಸದಾಗಿ ಕೊಠಡಿಗಳನ್ನು ಕಟ್ಟಿಸಿದ್ದೇವೆ. ಇನ್ನು ಅಲ್ಲಿ ಆಪರೇಷನ್ ಥಿಯೇಟರ್ ಇರಲಿಲ್ಲ. ಈಗ ಅಲ್ಲಿ ಆಪರೇಷನ್ ಥಿಯೇಟರ್‌ಸಹ ಕಟ್ಟಲಾಗಿದೆ. ಹಿಂದೆ ಅಲ್ಲಿ ವ್ಯವಸ್ಥಿತ ಲ್ಯಾಬೊರೇಟರಿ ಇರಲಿಲ್ಲ. ಈಗ ಲ್ಯಾಬೋರೇಟರಿಯನ್ನು ಕಟ್ಟಿಸಲಾಗಿದೆ. ಹಿಂದೆ ಇದ್ದ ಶೌಚಾಲಯಗಳು ಸರಿಯಾಗಿರಲಿಲ್ಲ. ಈಗ ಹೊಸದಾಗಿ ಶೌಚಾಲಯಗಳನ್ನು ಕಟ್ಟಿಸಿಕೊಡಲಾಗಿದೆ. ನೀರು ಸರಬರಾಜು ಮತ್ತು ಸ್ಯಾನಿಟೇಶನ್‌ಗಾಗಿ ಹಣ ಖರ್ಚಾಗಿದೆ. ವಿದ್ಯುಚ್ಛಕ್ತಿ ವ್ಯವಸ್ಥೆಯ ಜೀರ್ಣೋದ್ಧಾರವನ್ನು ಮಾಡಬೇಕಾಗಿತ್ತು; ಏಕೆಂದರೆ ಹಳೇ ಲೈನಿಂಗ್ ಅಲ್ಲಿತ್ತು , ಈಗ ಹೊಸದಾಗಿ ವೈರಿಂಗ್ ಮಾಡಿ ಎಲಿಕ್ಟ್ರಿಫಿಕೇಶನ್ ಕೆಲಸವನ್ನು ಮಾಡಲಾಗಿದೆ. ಅಲ್ಲಿಗೆ ಟ್ರಾನ್ಸ್‌ಫಾರ್ಮರ್‌ನ್ನೂ ಕೂಡ ಇದೇ ಖರ್ಚಿನೊಳಗೆ ಅಳವಡಿಸಿಕೊಳ್ಳಲಾಗಿದೆ.

ಶ್ರೀ ಜೆ. ಡಿ. ನಾಯಕ್ : ನೀವು ಕೊಟ್ಟಿರುವ ಉತ್ತರದಲ್ಲಿ ಹಾಲಿ ಇರುವ ಆಸ್ಪತ್ರೆಯನ್ನು 40 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಿರುವ ಬಗ್ಗೆ ಮಾತ್ರ ಹೇಳಿದ್ದೀರಿ. ಈಗ ಹೇಳಿದ ಅಂಶಗಳೆಲ್ಲಾ ಮುದ್ರಿತವಾಗಿರಲಿಲ್ಲ. ಇನ್ನು ನೀರು ಸರಬರಾಜಿನ ಬಗ್ಗೆ ಆ ಕಾರ್ಯವಾಗಿದೆಯೆಂದು ಹೇಳಿದ್ದೀರಿ. ಆದರೆ ಅಲ್ಲಿ ನೀರಿನ ಪೂರೈಕೆ ಸರಿಯಾಗಿ ಆಗಿಲ್ಲ. ಎಲ್ಲ ಕೆಲಸ ಅರ್ಧಂಬರ್ಧ ಆಗಿ ನಿಂತಿದೆ. ನಾನು ಸಾಕಷ್ಟು ಭಾರಿ ಅಲ್ಲಿಗೆ ಭೇಟಿ ಕೊಟ್ಟು ಇಂಜಿನಿಯರ್‌ರವರಿಗೆ ಹೇಳಿದರೂ ಕೂಡ ಇನ್ನೂ ಕೆಲಸ ಪೂರ್ಣವಾಗಿಲ್ಲ. ಕೆಲಸ ಪೂರ್ಣವಾಗದೇ ಇದ್ದರೂ ಕೂಡ ಆಸ್ಪತ್ರೆಯನ್ನು ಪೊಸೆಶನ್‌ಗೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ತನಿಖೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ : ನಾನು ಉನ್ನತ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ತಪಾಸಣೆ ಮಾಡಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇಂದಕ್ಕೆ ಸಂಬಂಧಪಟ್ಟಂತೆ ನಾನು ಸಹ ಒಂದು ಮಾತನ್ನು ಹೇಳಬಯಸುತ್ತೇನೆ. ಭಟ್ಕಳದಲ್ಲಿರುವ ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಡಿಯ ಆಸ್ಪತ್ರೆಯಂತೆಯೇ ಅಂಕೋಲಾದಲ್ಲೂ ಕೂಡ ಒಂದು ಆಸ್ಪತ್ರೆ ಇದೆ. ಈ ಕೆ.ಹೆಚ್.ಎಸ್.ಡಿ.ಪಿ. ಯೋಜನೆಯ ಕೆಲಸವನ್ನು ನೋಡಿಕೊಳ್ಳುವ ಬಗ್ಗೆ ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಒಬ್ಬ ಜೂನಿಯರ್ ಇಂಜಿನಿಯರ್ ಮಾತ್ರ ಇರುತ್ತಾರೆ. ಆತ ಡಿ.ಹೆಚ್.ಒ. ಕೆಳಗೆ ಬರುವುದಿಲ್ಲ. ಆದುದರಿಂದ ಆಸ್ಪತ್ರೆಯ ಕಟ್ಟಡ ಕೆಲಸದಲ್ಲಾಗಲೀ ಮತ್ತಿನ್ನಿತರ ಸುಧಾರಣಾ ಕಾರ್ಯಗಳು ಏನು ನಡೆಯುತ್ತಿವೆ ಎಂದು ಡಿ.ಹೆಚ್.ಒ. ರವರಿಗೂ ಗೊತ್ತಿರುವುದಿಲ್ಲ. ನಾನು ಒಮ್ಮೆ ಡಿ.ಹೆಚ್.ಒ ರವರನ್ನೇ ಕೆ.ಹೆಚ್.ಎಸ್.ಡಿ.ಪಿ. ಯೋಜನೆ ಆಸ್ಪತ್ರೆ ಕೆಲಸ ಏನಾಗುತ್ತಿದೆ ಎಂದು ಕೇಳಿದಾಗ ಅವರು ನನಗೆ ಏನೂ ಗೊತ್ತಿಲ್ಲವೆಂದರು. ಡಿ.ಹೆಚ್.ಒ.ಗೆ ವಿಷಯಗಳು ತಿಳಿಯುವುದಿಲ್ಲವೆಂದರೆ ಜಿಲ್ಲೆಯಲ್ಲಿ ಈ ಕೆ.ಹೆಚ್.ಎಸ್.ಡಿ.ಪಿ. ಯೋಜನೆಯ ಆಸ್ಪತ್ರೆ ಕೆಲಸ ಒಳ್ಳೆಯ ಗುಣಮಟ್ಟದಲ್ಲಿ ಆಗುತ್ತದೆ ಎಂದು ಹೇಳುವುದರಲ್ಲಿ ನಮಗೆ ಅನುಮಾನವಿದೆ. ಆದುದರಿಂದ ಮಾನ್ಯ ಮಂತ್ರಿಗಳು ಒಂದು ನಿರ್ದೇಶನವನ್ನು ಕೊಟ್ಟು ಸ್ಥಳೀಯ ಶಾಸಕರ ಜೊತೆಯಲ್ಲಿ ಅಥವಾ ಜಿಲ್ಲಾ ಪರಿಷತ್ ಸಭೆಗಳಲ್ಲಿ ಅವರು ಭಾಗವಹಿಸಬೇಕೆಂದು ಕೆಲಸಗಳ ಮಾಹಿತಿಯನ್ನು ಕೊಡಬೇಕಲ್ಲದೇ ಮಾಡಬೇಕಾಗಿರುವ ಹೇಳಬೇಕು. ಇದಲ್ಲದೇ ಕೆ.ಡಿ.ಪಿ. ಮೀಟಿಂಗ್‌ಗಳಲ್ಲಿ ಭಾಗವಹಿಸಿ ಯೋಜನೆಗೆ ಸಂಬಂಧಪಟ್ಟಂತೆ ಕೆಲಸಗಳ ಬಗ್ಗೆ ಶಾಸಕರಿಗೆ ಗಮನಕ್ಕೆ ತಂದೇ ಕೆಲಸಗಳನ್ನು ಮಾಡಬೇಕೆಂದು ನಿರ್ದೇಶನ ಕೊಟ್ಟರೆ ಮಾತ್ರ ಆಗಬೇಕಾಗಿರುವ ಕೆಲಸಗಳು ಒಳ್ಳೆಯ ಗುಣಮಟ್ಟದಲ್ಲಿರುತ್ತವೆ ಹೊರತು ಹೀಗೆ ಮಾಡದಿದ್ದರೆ ಕೇವಲ ಕೆ.ಹೆಚ್.ಎಸ್.ಡಿ.ಪಿ. ಹಣ ಬಂದು ಆ ಹಣ ವ್ಯರ್ಥವಾಗಿ ಖರ್ಚಾಗುತ್ತದಷ್ಟೆ.

12. 10 ಪಿ.ಎಂ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗಂಭೀರ ಸ್ವರೂಪದ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದುದರಿಂದ ನಾನು ಖಂಡಿತವಾಗಿ ಒಬ್ಬ ಉನ್ನತ ಅಧಿಕಾರಿಯನ್ನು ಸ್ಥಳಕ್ಕೆ ತಕ್ಷಣ ಕಳುಹಿಸಿಕೊಟ್ಟು ಅಲ್ಲಿಂದ ವಿವರವಾದಂತಹ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಎರಡನೆಯದಾಗಿ ಈ ಸದನ ಮುಗಿದ ಮೇಲೆ ಕಾರವಾರ ಜಿಲ್ಲೆಗೆ ಭೇಟಿ ಕೊಟ್ಟು ಪ್ರತಿಯೊಂದು ತಾಲ್ಲೂಕುಗಳ ಸಮೀಕ್ಷೆಯನ್ನು ಮಾಡುತ್ತೇನೆ.

ದೊಡ್ಡಬಳ್ಳಾಪುರದಲ್ಲಿ ಕುಡಿಯುವ ನೀರಿಗಾಗಿ ಬೋರ್‌ವೆಲ್‌ಗಳ ವ್ಯವಸ್ಥೆ

192 (1869) ಶ್ರೀ ಕೃಷ್ಣಪ್ಪ .ವಿ. (ದೊಡ್ಡಬಳ್ಳಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಳೆದ ಮೂರು ವರ್ಷಗಳಲ್ಲಿ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಜಿಲ್ಲಾ ಪಂಚಾಯತ್ ಮತಿಯಿಂದ ಹಾಗೂ ಸರ್ಕಾರದ ಮತಿಯಿಂದ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಅವುಗಳ ಪೈಕಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;